Sri Y. RAMAKRISHNA (Minister for Health).—

(*a*) No. The Taluk Development Board, Tiptur has now informed the Directorate of Health Services on 5th September 1968 that they have resolved in their meeting held on 17th August 1968 for shifting the R.S.L.F. Dispensary of Biligere to Kuppal Village.

(*b*) Does not arise in view of reply to clause (*a*) above.

(*c*) Yes, provided the necessary proposal as per Government Circular No. PLM 502 PPS 62, dated 20th February 1963 is received from the Taluk Development Board.

ಶ್ರೀ ವಿ. ಎರ್. ಶಿವಪ್ಪ.—ಸ್ಪ್ಯಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ಎರಡು ವರ್ಷದ ಹಿಂದೆಯೇ ಒಂದು ನಿರ್ಣಯ ಮಾಡರಾಗಿತ್ತು. ಆದರೆ ತಾವು ತಮ್ಮ ಉತ್ತರದಲ್ಲಿ 17-8-1968ರಲ್ಲಿ ನಿರ್ಣಯ ಮಾಡಿ ತಿಳಿಸಿರುತ್ತಾರೆಂದು ಹೇಳಿದ್ದೀರಿ. ಆ ನಿರ್ಣಯ ಏನು ಎಂಬುದನ್ನು ಹೇಳುತ್ತೀರಾ ?

†ಶ್ರೀ ವೈ. ರಾಮಕೃಷ್ಣ.—ತಾವು ಮೊದಲೇ ನಿರ್ಣಯ ಮಾಡಿರಬಹುದು, ಆದರೆ ಸರ್ಕಾರಕ್ಕೆ ಕಳಿಸದೇ ಇರಬಹುದು. ಈಗ ಸರ್ಕಾರಕ್ಕೆ ಏನು ಒಂದು ನಿರ್ಣಯ ಬಂದಿದೆ ಅದರ ತಾರೀಖನ್ನು ತಿಳಿಸಿದ್ದೇನೆ.

ಶ್ರೀ ವಿ. ಎರ್. ಶಿವಪ್ಪ.—ತಾರೀಖು 17-8-1968ರಲ್ಲಿ ಏನು ನಿರ್ಣಯ ಮಾಡಿ ಕಳಿಸಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಿರ್ಣಯ ಮಾಡಿದ್ದೇವೆಂದು ಮಾತ್ರ ತಿಳಿಸಿದ್ದಾರೆ.

ಶ್ರೀ ವಿ. ಎರ್. ಶಿವಪ್ಪ.—ಈ ಭಾಗದ 8 ಮೈಲಿಯ ಸುತ್ತಳತೆಯಲ್ಲಿ ಯಾವ ಒಂದು ಆಸ್ಪತ್ರೆಯೂ ಇಲ್ಲ. ಆದ್ದರಿಂದ ಈ ಗ್ರಾಮಕ್ಕೆ ಈಗಲಾದರೂ ಒಂದು ಔಷಧಾಲಯವನ್ನು ಕೊಡುವುದಕ್ಕೆ ತ್ವರಿತವಾಗಿ ಏರ್ಪಾಡು ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅಲ್ಲಿಗೆ ಕೊಡಬೇಕಾಗಿರುವ ಆಸ್ಪತ್ರೆಗೆ ಆಗುವ ಖರ್ಚಿನಲ್ಲಿ 50 ರಷ್ಟನ್ನು ತಾಲ್ಲೂಕ್ ಬೋರ್ಡಿನವರು ಕೊಡುತ್ತೇವೆಂದು ಒಂದು ನಿರ್ಣಯ ಮಾಡಿಕಳಿಸಿದರೆ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

Mr. SPEAKER.—Held over Question No. 431, but the hon. member is not here. Next question from Seventh List.

Nationalisation of Bus Routes

204. Sri ABDUL KHUDUS ANWAR (Bhadravathi).—

Will the Minister for Transport be pleased to state :—

(*a*) the number of private bus concerns that are effected due to the Nationalisation in Mangalore and Shimoga Districts ;

(*b*) the number of employees unemployed due to Nationalisation ;

(*c*) the number of such employees re-employed in M.S.R.T.C. ;

(*d*) whether the concerned Minister had assured that all such employees will be re-employeed in M.S.R.T.C. ;

(*e*) if so, whether they would implement the same ?

Sri H. C. BORIAH (Deputy Minister for Transport).—

(*a*) 201 operators (22 fully and rest partially).

(*b*) and (*c*) Information is not available.

(*d*) No.

(*e*) Does not arise in view of reply to clause (*d*).

ಶ್ರೀ ಅಬ್ದುರ್ ಖುದ್ದೂಸ್ ಅನ್ಸರ್.—ವಿವರಗಳು ಸಿಗುವುದಿಲ್ಲ ಎಂದು ಹೇಳಿದ್ದೀರಿ. ಇದರಲ್ಲಿ ಒಟ್ಟು 820 ಜನ ನಿರುದ್ಯೋಗಿಗಳಾಗಿದ್ದಾರೆ, ಇವರ ಬಗ್ಗೆ ನಾನು ಕೇಳುತ್ತಿರುವುದು.

†ಶ್ರೀ ಹೆಚ್. ಸಿ. ಬೋರಯ್ಯ.—ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ ಎನ್ನುವ ವಿವರಗಳನ್ನು ಕೊಡಲು ಆಗುವುದಿಲ್ಲ. ಇದು ಸಿಗುವುದೂ ಕಷ್ಟ. ಇದರಲ್ಲಿ ಮಂಗಳೂರು ಪ್ಯಾಕೆಟ್ ರಾಷ್ಟ್ರೀಕರಣ ಮಾಡಿದಾಗ 366 ಜನಕ್ಕೆ ತೊಂದರೆಯಾಗಿದೆ. ಇದರಲ್ಲಿ ರಾಷ್ಟ್ರೀಕರಣ ಮಾಡಿದಾಗ 122 ಜನರನ್ನು ಇಲ್ಲಿ ಕೆಲಸಕ್ಕೆ ನೇಮಿಸಲಾಯಿತು. 244 ಜನ ಖಾಸಗಿ ಬಸ್ಸುಗಳಲ್ಲಿ ಕೆಲಸಮಾಡುತ್ತಿದ್ದಾರೆ. ಶಿವಮೊಗ್ಗಾ ವಿಭಾಗದಲ್ಲಿ 56 ಜನಕ್ಕೆ ತೊಂದರೆಯಾಯಿತು ಮತ್ತು ಇದರಲ್ಲಿ 39 ಜನರನ್ನು ರಾಷ್ಟ್ರೀಕರಣವಾದಾಗ ಸೇರಿಸಲಾಗಿದೆ. ಹಾಗೆ ತುಮಕೂರು ಜಿಲ್ಲೆಯ 139 ಜನರನ್ನು ಸೇರಿಸಲಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ಅಬ್ದುರ್ ಖುದ್ದೂಸ್ ಅನ್ಸರ್.—ನಾವು ನಿರಿಯಾದ ಅಂಕಿಗಳನ್ನು ಕೊಟ್ಟರೆ ಅವರೆಲ್ಲರಿಗೂ ಕೆಲಸಗಳನ್ನು ಒದಗಿಸಿಕೊಡುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ನಾವು ಯಾರನ್ನೂ ನೇಮಕ ಮಾಡುವ ಹಾಗಿಲ್ಲ. ಯಾರಾದರೂ ಕೆಲಸವಿಲ್ಲದೆ ತೊಂದರೆಯಾಗಿದೆ ಎಂದು ಇದ್ದರೆ ನಾವು 8-11-1968ರಲ್ಲಿ ನೋಟಿಫಿಕೇಷನ್ 6ರಲ್ಲಿ ಹೇಳಿರುವಂತೆ ಅರ್ಜಿಗಳನ್ನು ಹಾಕಿದರೆ ಆಗ ಅವರ ಕೇಸುಗಳನ್ನು ಪರಿಶೀಲನಬಹುದು. ಇದಕ್ಕೆ ಡಿಸೆಂಬರು 15ನೇ ತಾರೀಖು ಕೊನೆ ದಿನವಾಗಿತ್ತು. ಈಗ ಎಷ್ಟೋ ಅರ್ಜಿಗಳು ಬಂದಿವೆ. ಇವನ್ನು ಪರಿಶೀಲನೆ ಮಾಡಿ ಅರ್ಹರಾಗಿರುವವರನ್ನು ನೇಮಕ ಮಾಡಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ.—ಖಾಸಗಿ ಬಸ್ಸುಗಳಿದ್ದ ಕಡೆಯಲ್ಲಿ ರಾಷ್ಟ್ರೀಕರಣ ಮಾಡಿದಾಗ ಅಲ್ಲಿನ ನೌಕರರುಗಳಿಗೆ ಬೇರೆ ಉದ್ಯೋಗಗಳನ್ನು ಕೊಡಿಸಿಕೊಡುವುದರಲ್ಲಿ ಸರಕಾರದ ನಿರ್ದಿಷ್ಟ ನೀತಿ ಏನಿದೆ ಅದನ್ನು ಸ್ಪಷ್ಟಪಡಿಸುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ರಾಷ್ಟ್ರೀಕರಣವಾದೊಡನೆ ಎಲ್ಲ ನೌಕರರುಗಳಿಗೂ ಉದ್ಯೋಗಗಳನ್ನು ಒದಗಿಸುತ್ತೇವೆ ಎನ್ನುವ ಯೋಚನೆ ಇಟ್ಟುಕೊಂಡಿಲ್ಲ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಎರಡು ಪಾಕೆಟ್ಟುಗಳನ್ನು ನ್ಯಾಷನಲೈಸು ಮಾಡಲು ಸರಕಾರಕ್ಕೆ ಆದ ವೆಚ್ಚವೆಷ್ಟು ಮತ್ತು ಈಗ 201 ಆಪರೇಟರುಗಳಿದ್ದಾರೆ ಎಂದು ಹೇಳಿದ್ದೀರಿ. ಇವರಿಗೆಲ್ಲ ಒಟ್ಟು ತಗಲುವ ವೆಚ್ಚವೆಷ್ಟು ?

ಶ್ರೀ ಹೆಚ್. ಸಿ. ಬೋರಯ್ಯ.—ಇದು ಬಹಳ ವಿವರಗಳನ್ನು ಕೊಡಬೇಕಾಗುತ್ತೆ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಆಗ ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ರಾಷ್ಟ್ರೀಕರಣ ಮಾಡಿದ ಮೇಲೆ ರಾಷ್ಟ್ರೀಕರಣದಿಂದ ಅನೇಕ ಉದ್ಯೋಗಿಗಳು ತೊಂದರೆಗೆ ಒಳಗಾದರು ಮತ್ತು ರಾಷ್ಟ್ರೀಕರಣದಿಂದ ಉತ್ಪತ್ತಿ ಕೂಡ ಕಡಿಮೆಯಾಯಿತು. ನಿನ್ನೆ ನಮ್ಮ ಮುಖ್ಯಮಂತ್ರಿಗಳು ಹೇಳುತ್ತಾ ನಮಗೆ ಸಮಾತಾವಾದ ಸಮಾಜದಲ್ಲಿ ನಂಬಿಕೆ ಇಲ್ಲ ಎನ್ನುವಂತೆ ಹೇಳಿದರು. ಆದಾಗ್ಯೂ ನಿರುದ್ಯೋಗಿಗಳಾದವರಿಗೆ ಸೂಕ್ತವಾದ ಉದ್ಯೋಗಗಳನ್ನು ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ನಾನು ಹೇಳುವುದು ಒಂದು, ಅವರು ಹೇಳುವುದು ಒಂದು. ಪ್ರಶ್ನೆಗಳನ್ನು ತಿರುಗಿಸಿ ತಿರುಗಿಸಿ ಹಾಕುತ್ತಿದ್ದಾರೆ. ಸಮಾತಾವಾದ ಸಮಾಜದಲ್ಲಿ ನಂಬಿಕೆ ಇಲ್ಲ ಎಂದು ನಾನು ಹೇಳಲಿಲ್ಲ. ಈ ಸಮಾತಾವಾದ ಸಮಾಜದಲ್ಲಿ ಯಾವ ರೀತಿಯಿಂದಲಾದರೂ ದುಡ್ಡನ್ನು ಗಳಿಸಬೇಕು ಎಂಬುದು ಇದರ ಧ್ಯೇಯವಲ್ಲ.

ಶ್ರೀ ಹೆಚ್. ಸಿ. ಬೋರಯ್ಯ.—ಪ್ರಯಾಣಿಕರ ಸೌಕರ್ಯಕ್ಕೋಸ್ಕರವಾಗಿ ಸಾರಿಗೆ ಸಂಸ್ಥೆಯನ್ನು ರಾಷ್ಟ್ರೀಕರಣ ಮಾಡಬೇಕೆಂಬ ಧೋರಣೆ ಇರುವುದರಿಂದ ಅದನ್ನು ಪುನರ್ವಿಮರ್ಶೆ ಮಾಡುವ ಕಾಲ ಒದಗಿ ಬಂದಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ರಾಷ್ಟ್ರೀಕರಣವಾಗುವುದಕ್ಕಿಂತ ಮುಂಚೆ ಖಾಸಗಿ ಬಸ್ಸುಗಳಲ್ಲಿರುವವರು ಯಾವ ಹುದ್ದೆಯಲ್ಲಿ ಇದ್ದರೋ ಅದಕ್ಕಿಂತ ಕಡಿಮೆ ಹುದ್ದೆಯನ್ನು ಈಗ ಕೊಟ್ಟಿದ್ದರೆ, ಅದೇ ಹುದ್ದೆಯನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಎಂಪ್ಲಾಯ್‌ಮೆಂಟ್ ನೋಟಿಫಿಕೇಷನ್ ಒಂದು ಹೊರಡಿಸಿದೆ. ಅದರ ಪ್ರಕಾರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಏನು ಇದೆ ಅದಕ್ಕೆ ಅನುಗುಣವಾಗಿರ ತಕ್ಕಂಥವರನ್ನು ಮತ್ತು ಅರ್ಹತೆ ಉಳ್ಳಂಥವರನ್ನು ಸಾಧ್ಯವಾದಷ್ಟು ತೆಗೆದುಕೊಳ್ಳಲು ಎಂ. ಎಸ್. ಆರ್. ಟಿ. ಸಿ. ಯವರು ಪ್ರಯತ್ನ ಮಾಡಿದ್ದಾರೆ.

Sri H. N. NANJE GOWDA.—Even though there are unemployed qualified persons, they have not been taken. The Chairman of the M.S.R.T.C. is taking his own people. If I show that unemployed qualified persons are not taken, will the Government take action against the Chairman of the M.S.R.T.C.

ಶ್ರೀ ಹೆಚ್. ಸಿ. ಬೋರಯ್ಯ.—ಉದಾಹರಣೆಗಳು ಏನಾದರೂ ಇದ್ದರೆ ಅದನ್ನು ಗಮನಕ್ಕೆ ತಂದರೆ ಉತ್ತರ ಹೇಳಬಹುದು.

Sri H. B. JWALANIAH.—How can we get answers from the Minister who is answering in an irresponsible way ?

Sri H. N. NANJE GOWDA.—He is evading answers.

Sri G. DUGGAPPA.—On a Point of Order.....

Mr. SPEAKER.—There can be no Point of order during Question Hour. The member asks if such favouritism is brought to the notice of Government whether the Government will like to take action ? Hon. Deputy Minister may answer that supplementary.

ಶ್ರೀ ಎಚ್. ಸಿ. ಬೋರಯ್ಯ.—ಅಂತಹ ಉದಾಹರಣೆಗಳನ್ನು ನಮ್ಮ ಗಮನಕ್ಕೆ ತಂದರೆ ಆ ವಿಷಯದ ಮೇಲೆ ತೀರ್ಮಾನ ತೆಗೆದುಕೊಳ್ಳಬಹುದು. ಅಂತಹ ಉದಾಹರಣೆಗಳು ಯಾವುದೂ ನಮ್ಮ ಕಣ್ಣು ಮುಂದೆ ಇಲ್ಲದೆ ಯಾವ ರೀತಿ ಉತ್ತರ ಹೇಳಲಿ.

Sri G. DUGGAPPA.—He is simply evading answers. He is a capable man. He should look into the records and reply. He is looking somewhere and answering.

ಶ್ರೀ ಎಸ್. ಶಿವಪ್ಪ.—ಮೈಸೂರು ರೋಡ್ ಟ್ರಾನ್ಸ್ ಪೋರ್ಟ್ ಇಲಾಖೆಯಲ್ಲಿ ಈಗ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇಮಕಗಳನ್ನು ಮಾಡುತ್ತಿರುವುದಾಗಿ ಹೇಳಿದರು. ಆದರೆ ಅಲ್ಲಿನ ಅಧ್ಯಕ್ಷರು ನಿಜಾಮಷಾಹಿ ರಾಜ್ಯದಿಂದ ಬಂದಿರುವ ಶ್ರೀ ಮಹಮ್ಮದ್ ಅಲಿ ಅವರು ನಿಜಾಮಿ ಫರ್ಮಾನ್ (ಫರ್ಮನ್) ಕೊಟ್ಟಿರುವುದು ನಿಜವೇ ?

ಶ್ರೀ ಎಚ್. ಸಿ. ಬೋರಯ್ಯ.—ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ, ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಬಿಟ್ಟು ಏನೂ ಮಾಡುವುದಕ್ಕೆ ಆಗುವುದಿಲ್ಲ....

ಶ್ರೀ ಎಸ್. ಶಿವಪ್ಪ.—ಅವರು ಫರ್ಮಾನ್ ಕೊಟ್ಟಿದ್ದಾರಲ್ಲ, ಅದರ ಬಗ್ಗೆ ಹೇಳಿ.

Sri K. PUTTASWAMY (Minister for Law, Labour and Parliamentary Affairs).—Sir, the question offends rule 36(2) (f) of Rules of Procedure. It reads as follows :

> "36. (2) (f) it shall not contain arguments, inferences, ironical expressions, imputations, epithets or defamatory statement."

I would like the Hon'ble Leader of Opposition to realise this aspect of the rules.

ಶ್ರೀ ಎಚ್. ಸಿ. ಬೋರಯ್ಯ.—ಆ ಫರ್ಮನ್ ಯಾವುದೂ ಇಲ್ಲ.

Smt. WINNIFRED F. FERNANDES.—In answer to (*b*) and (*c*) you have stated that information is not available. May I know the reasons for not getting this information, as it is high time now that the Mangalore and Shimoga routes are nationalised ? Also I want to know the number of representations received from the unemployed employees affected by the said Nationalisation ? Also may I know whether you have taken any action ?

ಶ್ರೀ ಎಚ್. ಸಿ. ಬೋರಯ್ಯ.—ನಿರುದ್ಯೋಗಿಗಳು ಯಾರಿದ್ದಾರೆ ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಖಾಸಗಿ ಬಸ್‌ನಲ್ಲಿದ್ದ ವರಿಗೆ ಕೆಲಸವಿಲ್ಲದೆ ಇದ್ದರೂ ಅವರು ತಕ್ಷಣ ನಿರುದ್ಯೋಗಿ ಗಳಾಗಿರುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬೇರೆ ಬೇರೆ ಉದ್ಯಮಗಳಲ್ಲಿ ತೊಡಗಿರುತ್ತಾರೆ. ಮಂಗಳೂರು ಮತ್ತು ಶಿವಮೊಗ್ಗ ಭಾಗಗಳಲ್ಲಿ ಖಾಸಗಿ ಬಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ವರಿಗೆ ಒಂದು ಅವಕಾಶವನ್ನು ಕೊಡುವುದಕ್ಕಾಗಿ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂರ್ಸ್ ಸ್ವಲ್ಪ ನಡಿಲ ಮಾಡಿ ಡೈರೆಕ್ಷನ್ ಕೊಟ್ಟಿದೆ. ಅದರ ಪ್ರಕಾರವಾಗಿ 8-11-68 ರಲ್ಲಿ ಒಂದು ನೋಟಿಫಿಕೇಷನ್ ಹೊರಡಿಸಿ 15-12-68ರ ಒಳಗಾಗಿ ಅರ್ಜಿಗಳನ್ನು ನಲ್ಲಿಸಬೇಕು ಎಂದು ತಿಳಿಸ ರಾಗಿತ್ತು. ಆ ಪ್ರಕಾರ ಬಂದಿರುವ ಅರ್ಜಿಗಳನ್ನು ನ್ಕ್ರೂಟಿನಿ ಮಾಡುತ್ತಿದ್ದೇವೆ. ಅವುಗಳನ್ನು ಪರಿ ಶೀಲಿಸಿದಮೇಲೆ ಏನಾದರೂ ಹೇಳುವುದಕ್ಕೆ ಸಾಧ್ಯವಾಗುತ್ತದೆ.

Sri D. DEVARAJ URS.—May I know from the Government whether it is not the policy of the Corporation, before nationalisation of a particular route or introduction of a particular scheme, to take note of all the employees under the private operators and thereby come to know who are all the employees to whom they should provide opportunities of employement in the Corporation ? If so, have the Corporation pursued that policy, Sir ?

ಶ್ರೀ ಎಚ್. ಸಿ. ಬೋರಯ್ಯ.—ರಾಜ್ಯದಲ್ಲಿರುವ ಬಸ್ ಮಾಲೀಕರನ್ನು ಕೇಳಿ ಅವರಲ್ಲಿ ಯಾರು ಯಾರು ನೌಕರಿಯಲ್ಲಿದ್ದರು ಎಂದು ಕಳಿಸಿಕೊಟ್ಟಿರುವ ಪಟ್ಟಿಯನ್ನು ಇಟ್ಟುಕೊಂಡಿದ್ದೇವೆ. ಆದರೆ ಕೆಲಸ ಖಾಲಿ ಇರುವ ಬಗ್ಗೆ ನೋಟಿಫಿಕೇಷನ್ ಹೊರಡಿಸಿದಾಗ ಅವರು ಅರ್ಜಿಯನ್ನು ಹಾಕಿಕೊಳ್ಳ ಬೇಕು. ಗೊತ್ತು ಮಾಡಿರತಕ್ಕ ಅರ್ಹತೆ ಇದ್ದರೆ ಮಾತ್ರ ನೇಮಕ ಮಾಡಿಕೊಳ್ಳುವುದಕ್ಕೆ ಸಾಧ್ಯ ವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರೊಬ್ಬರು ಯಾರು ಯಾರು ಕೆಲಸ ಕಳೆದು ಕೊಂಡಿದ್ದಾರೆ ಅಂಥವರಿಗೆ ಕೊಡಬೇಕು ಎನ್ನುವ ಧೋರಣೆ ಇದೆಯೇ ಎಂದು ಕೇಳಿದಾಗ ಆ ತರಹ ನೀತಿ ಇಲ್ಲ ಎಂದು ಹೇಳಿದರು. ಕೈಗಾರಿಕಾ ವಿವಾದದ ಶಾಸನದ ಪ್ರಕಾರ ಯಾವುದಾದರೂ ಎಸ್ಟಾಬ್ಲಿಷ್‌ಮೆಂಟ್ ಟ್ರಾನ್ಸ್‌ಫರ್ ಮಾಡುವುದು, ಅಥವಾ ಮಾಡಿಕೊಳ್ಳುವುದಾಗಲೀ, ಬೇರೆ ರೀತಿ ಯಲ್ಲಿ ಅದನ್ನು ಮುಚ್ಚಿದ್ದರಾಗಲೀ, ಆ ರೀತಿ ಆದಾಗ ಕೆಲಸವಿಲ್ಲದೆ ಇರುವವರಿಗೆ ಮೊದಲು ಕೆಲಸ ಕೊಡಬೇಕು ಎನ್ನುವ ಶಾಸನವಿಲ್ಲವೇ ? ಆ ಶಾಸನ ಸರ್ಕಾರಕ್ಕೂ ಅನ್ವಯಿಸುವುದಿಲ್ಲವೇ. ಸರ್ಕಾರಕ್ಕೆ ಅನ್ವಯವಾಗುವುದಿಲ್ಲ ಎಂದರೆ ಅದು ಕಾನೂನಿಗೆ ವಿರೋಧವಾಗುವುದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಕಾನೂನು ಪ್ರಶ್ನೆ ನಮ್ಮ ಮಿತ್ರರು ಎತ್ತಿದ್ದಾರೆ. ಅದಕ್ಕೆ ಉತ್ತರ ಹೇಳಲು ನೋಟೀಸ್ ಬೇಕು.

Mr. SPEAKER.—One suggestion I have to make to hon. Members. If they have more supplementaries to put they could raise half-an-hour discussion on the particular question.